ಎಂಬ ಗಟ್ಟಿಮುಟ್ಟಾದ ಯುವ ಕಾರ್ಮಿಕನ ಕಥೆಯಾಗಿದೆ. ಅವನು ದುಡಿಯುತ್ತಿರುವ ಕಾರ್ಖಾನೆಯಲ್ಲಿ ಒಮ್ಮೆ ಸಂಘಟಕನೊಬ್ಬ ಬಂದು ಕಾರ್ಮಿಕರಿಗೆ ಹೆಚ್ಚು ವೇತನಕ್ಕಾಗಿ ಮುಷ್ಕರವನ್ನು ಪ್ರಾರಂಭಿಸುತ್ತಾನೆ. ಅವನ ಮಾತುಗಳು, 'ನಿಮ್ಮ ದುಡಿತದ ಫಲದಿಂದಲೇ ನಿಮ್ಮ ಮಾಲೀಕರು, ಬಂಡವಾಳಶಾಹಿಗಳು ದಿನದಿನವೂ ಕೊಬ್ಬುತ್ತಿದ್ದರೂ ನಿಮ್ಮನ್ನು ಮಾತ್ರ ಈ ರೀತಿ ಶೋಷಿಸುವುದು ಸರಿಯೇ ಹೇಳಿ?' ಲೇಖಕರಿಗೆ ಇರುವ ಸ್ಪಷ್ಟತೆಗೂ ಸಾಕ್ಷಿಯಾಗುತ್ತವೆ. ಹೊಸದಾಗಿ ಮದುವೆಯಾಗಿ ಸಣ್ಣ ಮಗುವಿನ ತಂದೆಯಾಗಿದ್ದ ಬೋರನಿಗೆ ಈ ಚಳವಳಿ ಕಳವಳವನ್ನೇ ಹುಟ್ಟಿಸುತ್ತಿತ್ತು. ಅವನಿಗೆ ನಿತ್ಯ ಕೂಲಿ ಸಿಗಲಿಲ್ಲವೆಂದಾದರೆ ಮಡದಿ ಮತ್ತು ಮಗು ಉಪವಾಸ ಇರಬೇಕಾಗುತ್ತದೆ.

ಮರುದಿನ ಕಾರ್ಖಾನೆಗೆ ಹೋದಾಗ, ಒಂದು ಕಡೆ ಇವನ ಕಾರ್ಖಾನೆಯ ಕಾರ್ಮಿಕರು ಗೇಟಿನ ಹೊರಗೆ ನಿಂತು ಪ್ರತಿಭಟಿಸುತ್ತಿದ್ದಾರೆ. ಅತ್ತ ಮಾಲೀಕರು ಕಾರ್ಮಿಕರ ಬೇಡಿಕೆಗೆ ಒಪ್ಪದೇ ಲಾರಿಯಲ್ಲಿ ಬೇರೆ ಕಾರ್ಮಿಕರನ್ನು ಕರೆತಂದು ಕಾರ್ಖಾನೆಯ ಒಳಗೆ ಕರೆದುಕೊಂಡು ಹೋಗುತ್ತಾರೆ. ಅದನ್ನು ವಿರೋಧಿಸಿದವರನ್ನು ಪೊಲೀಸರು ಬಂಧಿಸಿ ಕರೆದೊಯ್ಯುತ್ತಾರೆ.

ಕಥೆ ಇಲ್ಲಿಗೆ ಮುಗಿಯುತ್ತದೆ. ಕಾರ್ಮಿಕ ಸಮಸ್ಯೆಯ ವಿವಿಧ ಮುಖಗಳನ್ನು ತೋರಿಸುವ ಸೀಮಿತ ಉದ್ದೇಶದಿಂದ ಕಯ್ಯಾರರು ಈ ಕಥೆಯನ್ನು ಬರೆದಂತಿದೆ. ಇದರಲ್ಲಿ ಪ್ರಗತಿಶೀಲ ಕಥೆಗಳ ಎಲ್ಲ ಪರಿಕರಗಳೂ ಇವೆಯಾದರೂ ಅಂತಹ ಆಶಯ ಕಾಣಿಸದು. ಪ್ರಗತಿಶೀಲ ಆಶಯಗಳನ್ನೇ ಪ್ರತಿಪಾದಿಸುತ್ತಾ ಹೋಗುವ ಕಥೆಗಳು ಒಂದೇ ಪಡಿಯಚ್ಚಿನಲ್ಲಿ ಮೂಡಿದ ಜೆರಾಕ್ಸ್ ಕಾಪಿಗಳಂತಾಗುವುದರಿಂದ ಕಯ್ಯಾರರು ವಾಸ್ತವದ ಒಂದು ಚಿತ್ರಣವನ್ನು ಕೊಡುವ ಇಂತಹ ಕಥೆಯನ್ನು ಬರೆದಿದ್ದಾರೆ.

ಉಳಿದ ಕಥೆಗಳಲ್ಲಿ ಮೂವರು ಮಹಿಳೆಯರ (ಆಜಾಮ್‌ಗರ್ ಮಹಾರಾಣಿ ಚಾಂದ್, ಕೇರಳದ ಮಾಪಿಳ್ಳಾ ದಂಗೆಯ ಕಾಲದ ಅಯೇಷಾ ಮತ್ತು ಕುಂಬಳೆ ಸೀಮೆಯ ರಾಬಿನ್‌ಹುಡ್ ರೀತಿಯ ದರೋಡೆಗಾರ ನಾಯಕ ಮಲ್ಲಯ್ಯನ ಪ್ರೇಯಸಿ ಹೊನ್ನಿ) ಧೈರ್ಯ, ನಿಷ್ಠೆಗಳನ್ನು ದಾಖಲಿಸುವ ಮೂರು ಐತಿಹ್ಯ ಕಥೆಗಳು, ಹುಮಾಯೂನನ ನ್ಯಾಯಗುಣವನ್ನು ಹೇಳುವ ಒಂದು ಕಥೆ ಮತ್ತು ಭಾವ ಸತ್ಯವನ್ನು ಹೇಳುವ ಕಥನಗಳು ಸೇರಿವೆ. 'ಎರಡು ಚಿತ್ರಗಳು', 'ಪುನರ್ಮಿಳನ' ಮತ್ತು 'ಮರವೆಯಲ್ಲಿ' ಎನ್ನುವ ಕಥೆಗಳು ಜೀವನದ ವೈಚಿತ್ರ್ಯಗಳನ್ನು ಹೇಳಲು ಕಟ್ಟಿದಂತಿರುವ ಕಥೆಗಳು. ನವೋದಯ ಕಾಲದಲ್ಲಿ ಸೃಷ್ಟಿಯಾದ ಈ ಬಗೆಯ 'ಕಥೆ'ಗಳನ್ನು ಆಧುನಿಕ 'ಕಥೆ'ಗಳ ಮಾನದಂಡದಲ್ಲಿ ಅಳೆಯುವಂತಿಲ್ಲ. ಆರ್ಥರ್ ಶ್ನಿಟ್ಲರ್‌ನ (ಆಸ್ಟ್ರಿಯ, 1862-1931) 'ಮುಮ್ಮಡಿ ಎಚ್ಚರಿಕೆ' ಕಥೆಯ ಮಾದರಿಯ ಕಥೆಗಳು ಕನ್ನಡದಲ್ಲಿಯೂ ಆ ಕಾಲದಲ್ಲಿ ಕಾಣಿಸಿಕೊಂಡಿದ್ದವು. ಅಂತಹ ಕಥೆಗಳ ಮಾದರಿಯಲ್ಲಿ ಕಯ್ಯಾರರ 'ಮರವೆಯಲ್ಲಿ' ಒಂದು ಉತ್ತಮ ಕಥೆಯಾಗಿದೆ.

ಕಯ್ಯಾರ ಕಿಂಞಣ್ಣ ರೈಗಳ 'ಅನ್ನದೇವರು ಮತ್ತು ಇತರ ಕಥೆಗಳು' (1941) ಸಂಕಲನದ ಶೀರ್ಷಿಕೆಯು ಕುವೆಂಪು ಅವರ 'ನನ್ನ ದೇವರು ಮತ್ತು ಇತರ ಕಥೆಗಳು' (1940) ಎಂಬ ಕಥಾಸಂಕಲನದ ಶೀರ್ಷಿಕೆಯನ್ನು ಹೋಲುವುದು ವಿಶೇಷವಾಗಿದೆ. ಅದನ್ನು ಗಮನದಲ್ಲಿಟ್ಟುಕೊಂಡೇ ಈ ಶೀರ್ಷಿಕೆಯನ್ನು ಇರಿಸಿರಬಹುದು.

'ಪ್ರಗತಿಶೀಲತೆ' (1990) ಪುಸ್ತಕದಲ್ಲಿ ಎಚ್.ಎಸ್. ರಾಘವೇಂದ್ರ ರಾವ್ ಹೇಳುವ ಈ ಮಾತುಗಳನ್ನು ಉಪಸಂಹಾರವಾಗಿ ಇಲ್ಲಿ ಉದ್ಧರಿಸಬಹುದು: 'ಒಟ್ಟು ಸನ್ನಿವೇಶವನ್ನು ಹಿನ್ನೋಟದ ಬಲದಿಂದ ನೋಡಿದಾಗ, ಹಳೆಯ ಮೈಸೂರು ರಾಜ್ಯದ ಹೊರಗೆ ಸಾಹಿತ್ಯ ರಚನೆ ಮಾಡುತ್ತಿರಬಹುದಾದ ಪ್ರಗತಿಶೀಲರ ಬಗ್ಗೆ ಪ್ರಗತಿಶೀಲ ಚಳವಳಿ ತೋರಿಸಿದ ದಿವ್ಯ ನಿರ್ಲಕ್ಷ್ಯ ಅಚ್ಚರಿ ಹುಟ್ಟಿಸುತ್ತದೆ... ಇಲ್ಲವಾದರೆ ಸೃಜನಶೀಲತೆ ಮತ್ತು ಸಾಹಿತ್ಯರೂಪದ ದೃಷ್ಟಿಯಿಂದ ಇವರೆಲ್ಲರಿಗಿಂತ ಎಷ್ಟೋ ಪಟ್ಟು ಸಮರ್ಥರಾದ ಕಾರಂತ, ಶ್ರೀರಂಗರಂಥ ಲೇಖಕರು ಪ್ರಗತಿಶೀಲತೆಯ ಪರಿಕಲ್ಪನೆಗೆ ಹೊಸ ಆಯಾಮಗಳನ್ನು ಸೇರಿಸುತ್ತಿದ್ದರೇನೋ'. ●